

ಏಕೆಂದರೆ ಈಗಂತೂ ನಮಗೆಲ್ಲರಿಗೂ ಮೊಬೈಲ್, ಬೈಬಲ್ ಅಷ್ಟೇ ಅಲ್ಲ, ಅದೇ ರಾಮಾಯಣ, ಭಗವದ್ಗೀತೆ, ಶ್ರೀಮದ್ಭಾಗವತ ಎಲ್ಲವೂ ಅಲ್ಲವೇ!

ಇನ್ನೊಂದು ಸಲ 'ಅಮ್ಮಾ ನೀನು ಎಷ್ಟೋ ದಿನದಿಂದ ಮಾರ್ಬಲ್ ಕಥೇನೆ ಹೇಳಿಲ್ಲ' ಅಂತ ಅಂದ. ನಾನ್ಯಾವಾಗ ಮಾರ್ಬಲ್ ಕಥೆ ಹೇಳಿದ್ದೆ ಅಂತ ನನಗೆ ದಿಗಿಲಾಯಿತು. 'ಇಲ್ವಲ್ಲ, ನನಗೆ ಮಾರ್ಬಲ್ ಕಥೆ ಹೇಳಿದ್ದು ನೆನಪಿಲ್ಲ, ಮಾರ್ಬಲ್ ಬಗ್ಗೆ ನನಗೆ ಯಾವ ಕಥೆನೂ ಬರೋದಿಲ್ಲ, ಬೇರೆ ಯಾವುದಾದರೂ ಕಥೆ ಹೇಳ್ತೀನಿ' ಅಂದೆ. ಹಿಡಿದ ಪಟ್ಟು ಬಿಡದೇ 'ಇಲ್ಲ, ನಂಗೆ ಮಾರ್ಬಲ್ ಕಥೇನೆ ಬೇಕು' ಎಂದ. ಬೇರೆ ದಾರಿಯಿಲ್ಲದೆ ಯೂಟ್ಯೂಬ್‌ನಲ್ಲಿ ಮಾರ್ಬಲ್ ಕಥೆ ಎಂದು ಟೈಪಿಸಿದೆ. ಯೂಟ್ಯೂಬ್‌ನಲ್ಲಿ ಏನು ಸಿಗೋದಿಲ್ಲ ಹೇಳಿ, ಹುಡುಕಿದ್ದೆಲ್ಲಾ ಮಾತ್ರವಲ್ಲ – ಹುಡುಕಲಾರದ್ದೆಲ್ಲಾ, ನೋಡಬಾರದ್ದೆಲ್ಲ ಸಿಗುತ್ತೆ. ಹಾಗೆಯೇ ಮಾರ್ಬಲ್ ಕಥೆಯೂ ಸಿಕ್ತು. ಅದನ್ನೇ ಪ್ಲೇ ಮಾಡಿ ಕೇಳಿ ಅವನಿಗೆ ಅದರ ಕಥೆ ಹೇಳಬೇಕು ಎಂದು ಪ್ಲೇ ಬಟನ್ ಒತ್ತಿದೆ. 'ಇದು ಮಾರ್ಬಲ್ ಕಥೆ ಅಲ್ಲ, ಇದರಲ್ಲಿ ರಾಜನೂ ಇಲ್ಲ, ಅರಮನೆನೂ ಇಲ್ಲ, ಮಾರ್ಬಲ್‌ನೂ ಇಲ್ಲ' ಅಂದ. ಆಗಲೇ ನನಗೆ ಗೊತ್ತಾಗಿದ್ದು ಅವನು ಕೇಳ್ತಾ ಇರೋದು ಮಾರ್ಬಲ್ ಅಲ್ಲ ಬೀರಬಲ್ ಕಥೆ ಅಂತ. 'ಅವನ ಹೆಸರು ಮಾರ್ಬಲ್ ಅಲ್ಲ, ಬೀರಬಲ್' ಎಂದೆ. 'ಹಾ, ಅವನೇ, ಅದೇ ಕಥೆ' ಅಂದ. ಹೀಗೆ ಬುದ್ಧಿವಂತ ಬೀರಬಲ್ ನನ್ನ ಮಗನ ಬಾಯಲ್ಲಿ ಮಾರ್ಬಲ್ ಆಗಿಬಿಟ್ಟ. ಸದ್ಯ, ಅಕ್ಬರ್ ಬಚಾವಾದ. ಅಕ್ಬರ್ ಬಬ್ಬರ್ ಆಗ್ಲಿಲ್ಲ.

ಒಂದು ಸಲ ನನ್ನ ಮಗ ನಾಲ್ಕು ವರ್ಷದವನಿದ್ದಾಗ ಶಾಲೆಯಲ್ಲಿ ಏರ್ಪಡಿಸಿದ್ದ ಸ್ಪರ್ಧೆಗಳಲ್ಲಿ ಗೆದ್ದಿದ್ದ. ಅವನು ಮನೆಗೆ ಬಂದ ತಕ್ಷಣ, 'ಅಮ್ಮಾ, ಸ್ಪರ್ಧೆಯಲ್ಲಿ ಗೆದ್ದಿದ್ದಕ್ಕೆ ಇವತ್ತು ನಮ್ಮ ಟೀಚರ್ ನನಗೆ ಸಕ್ಕಿಫಿಕೇಟ್ ಕೊಟ್ರು' ಅಂದ. ನಾನು ಅದನ್ನು ಸಕ್ರಿ ಪಾಕೀಟ್ ಅಂತ ತಿಳಿದುಕೊಂಡೆ. ಯಾಕಂದ್ರೆ ಸಕ್ಕರೆಗೆ ಸಕ್ಕಿ (ಸಕ್ರಿ) ಅಂತಿದ್ದ. 'ಅಯ್ಯೋ, ಬರೀ ಸಕ್ರಿ ಕೊಟ್ರಾ? ಗೇಮ್ಸ್‌ನಲ್ಲಿ ಗೆದ್ದರೆ ಮೆಡಲ್ ಕೊಡ್ಬೇಕು, ಅದು ಹೋಗಲಿ ಒಂದು ಸರ್ಟಿಫಿಕೇಟ್ ಆದ್ರೂ ಕೊಡಬಹುದಿತ್ತಲ್ಲಾ' ಅಂದೆ. ಅವನು 'ಹಾ ಹಾ ಅದೇ ಸಕ್ಕಿಫಿಕೇಟ್ ಕೊಟ್ಟಿದ್ದಾರೆ'